ಇ-ಮೇಲ್ ಮಾಡಿ

ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1.**

**ಸಂಖ್ಯೆ: ಎಡಿಎಂ2(1)/ಶಿ.ರಾ.ಪ್ರ /01/ 2021-22.** **ದಿನಾಂಕ: 19-08-2021.**

**-:ಸುತ್ತೋಲೆ:-**

ವಿಷಯ:-2021-22 ನೇ ಸಾಲಿನ **"ರಾಜ್ಯ ಮಟ್ಟದ ಉತ್ತಮ ಶಿಕ್ಷಕ"** ಪ್ರಶಸ್ತಿಗೆ ತಾಲ್ಲೂಕು ಮತ್ತು ಜಿಲ್ಲಾ ಆಯ್ಕೆ ಸಮಿತಿಗಳು ಆನ್-ಲೈನ್ ಮೂಲಕ ಪ್ರಸ್ತಾವನೆಗಳನ್ನು ಸಲ್ಲಿಸುವ ಅಂತಿಮ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ:- ಇದೇ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ:23.07.2021 & 05.08.2021.

*********

2021-22 ನೇ ಸಾಲಿನ **"ರಾಜ್ಯ ಮಟ್ಟದ ಉತ್ತಮ ಶಿಕ್ಷಕ"** ಪ್ರಶಸ್ತಿಗೆ ತಾಲ್ಲೂಕು ಮತ್ತು ಜಿಲ್ಲಾ ಆಯ್ಕೆ ಸಮಿತಿಗಳು ಆನ್-ಲೈನ್ ಮೂಲಕ ಪ್ರಸ್ತಾವನೆಗಳನ್ನು ಮುಂದಿನ ಹಂತಕ್ಕೆ ಸಲ್ಲಿಸಲು ಕ್ರಮವಾಗಿ ದಿನಾಂಕ:19-08-2021 ಮತ್ತು 24-08-2021 ರವರೆಗೆ ನಿಗದಿಪಡಿಸಲಾಗಿದ್ದ **ಅಂತಿಮ ಅವಧಿಯನ್ನು ತಾಂತ್ರಿಕ ಕಾರಣಗಳಿಂದ ಕ್ರಮವಾಗಿ ದಿನಾಂಕ: 21-08-2021 ಮತ್ತು 25-08-2021 ರವರೆಗೆ ವಿಸ್ತರಿಸಲಾಗಿದೆ.**

ಈ ಅವಧಿಯೊಳಗಾಗಿ ತಾಲ್ಲೂಕು ಮತ್ತು ಜಿಲ್ಲಾ ಆಯ್ಕೆ ಸಮಿತಿಗಳು ತಮಗೆ ಆನ್-ಲೈನ್ ಮೂಲಕ ಸ್ವೀಕೃತವಾಗಿರುವ / ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಉಲ್ಲೇಖಿತ ಸುತ್ತೋಲೆಗಳ ಅನುಸಾರ ಮುಂದಿನ ಹಂತಕ್ಕೆ ಆನ್-ಲೈನ್ ಮೂಲಕ ಕಳುಹಿಸಲು ಸೂಕ್ತ ಕ್ರಮಗಳನ್ನು ಸಕಾಲದಲ್ಲಿ ವಹಿಸುವಂತೆ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು (ಆಡಳಿತ ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ರವರುಗಳಿಗೆ ಮತ್ತೊಮ್ಮೆ ತಿಳಿಸಲಾಗಿದೆ. ಉಳಿದ ಅಂಶಗಳು ಯಥಾವತ್ತಾಗಿ ಮುಂದುವರೆಯುತ್ತದೆ.

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ವಂದನಾಪೂರ್ವಕವಾಗಿ ಕಳುಹಿಸುತ್ತಾ ಜಿಲ್ಲಾ ಆಯ್ಕೆ ಸಮಿತಿಯ ನೇತೃತ್ವ ವಹಿಸಿ ಆಯ್ಕೆ ಪ್ರಕ್ರಿಯೆಯನ್ನು ಸಕಾಲದಲ್ಲಿ ಪೂರ್ಣಗೊಳಿಸಿ ಕೊಡಲು ಮತ್ತೊಮ್ಮೆ ಕೋರಿದೆ.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಂದನಾಪೂರ್ವಕವಾಗಿ ಕಳುಹಿಸುತ್ತಾ ತಾಲ್ಲೂಕು ಆಯ್ಕೆ ಸಮಿತಿಯ ನೇತೃತ್ವ ವಹಿಸಿ ಆಯ್ಕೆ ಪ್ರಕ್ರಿಯೆಯನ್ನು ಸಕಾಲದಲ್ಲಿ ಪೂರ್ಣಗೊಳಿಸಿ ಕೊಡಲು ಮತ್ತೊಮ್ಮೆ ತಿಳಿಸಿದೆ.
3. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) & ಉಪನಿರ್ದೇಶಕರು (ಅಭಿವೃದ್ಧಿ), ಸಾ.ಶಿ.ಇಲಾಖೆ ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇಲಾಖೆ ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ.

5. ಹಿರಿಯ ಸಹಾಯಕ ನಿರ್ದೇಶಕರು (ಇ–ಆಡಳಿತ ಘಟಕ), ಆಯುಕ್ತರ ಕಛೇರಿ, ಸಾ.ಶಿ.ಇ., ಇವರು ಇಲಾಖಾ ಅಂತರ್ಜಾಲ ತಾಣದ ಮುಖ ಪುಟದಲ್ಲಿ ಕಾಣುವಂತೆ ರಾಜ್ಯ ಪ್ರಶಸ್ತಿ ಕುರಿತಾದ ಕೊಂಡಿಯನ್ನು(ಲಿಂಕ್) ಅಳವಡಿಸುವಂತೆ ಮತ್ತು ಸಂಪೂರ್ಣ ಪ್ರಕ್ರಿಯೆಯನ್ನು ಆನ್–ಲೈನ್ ಮೂಲಕ ಯಶಸ್ವಿಯಾಗಿ ಪೂರ್ಣಗೊಳಿಸಲು ಮತ್ತೊಮ್ಮೆ ಸೂಚಿಸಿದೆ.
6. ಹಿರಿಯ ಸಹಾಯಕ ನಿರ್ದೇಶಕರು (ಸಾರ್ವಜನಿಕ ಸಂಪರ್ಕ ಮತ್ತು ಶಿಕ್ಷಣ ವಾರ್ತೆ) ಇವರು ಶಿಕ್ಷಣ ವಾರ್ತೆಯಲ್ಲಿ ಪ್ರಕಟಿಸಲು ಸೂಕ್ತ ಕ್ರಮವಹಿಸುವುದು.

ಪ್ರತಿಯನ್ನು ಮಾಹಿತಿಗಾಗಿ,

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
02. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಕಲಬುರಗಿ ಇವರುಗಳಿಗೆ.
03. ನಿರ್ದೇಶಕರು, (ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
04. ನಿರ್ದೇಶಕರು (ಡಿ.ಎಸ್.ಇ.ಆರ್.ಟಿ), ರಿಂಗ್ ರಸ್ತೆ, ಬನಶಂಕರಿ, ಬೆಂಗಳೂರು.
05. ಜಂಟಿ ನಿರ್ದೇಶಕರು,(ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
06. ಸಹ ನಿರ್ದೇಶಕರು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆ.ಜಿ ರಸೆ, ಬೆಂಗಳೂರು.
07. ಅಧ್ಯಕ್ಷರು, ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಮತ್ತು ಶಿಕ್ಷಣಾಧಿಕಾರಿಗಳ ಸಂಘ, ಬೆಂಗಳೂರು.
08. ಅಧ್ಯಕ್ಷರು, ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಸಂಘ, ಬೆಂಗಳೂರು.
09. ಅಧ್ಯಕ್ಷರು, ಸರ್ಕಾರಿ ಗ್ರೇಡ್–1 ದೈಹಿಕ ಶಿಕ್ಷಕರ ಸಂಘ, ಬೆಂಗಳೂರು.
10. ಅಧ್ಯಕ್ಷರು, ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು.
11. ಅಧ್ಯಕ್ಷರು, ಸರ್ಕಾರಿ ಪ್ರಾಥಮಿಕ ಶಾಲಾ ಗ್ರೇಡ್–2 ದೈಹಿಕ ಶಿಕ್ಷಕರ ಸಂಘ, ಬೆಂಗಳೂರು.
12. ಕಛೇರಿ ಪ್ರತಿ.